Ref.No.54/2020

MW-1,

ದಿನಾಂಕಃ 15-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಎನ್ ಎನ್ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ ನಂ.7 ರಲ್ಲಿ ಚಾರ್ಟರ್ಸ ಆಫ್ ಡಿಮ್ಯಾಂಡನ್ನು ಕ್ಲೇಮ್ ಮಾಡಿದಾಗ ಆರ್ಥಿಕ ತೊಂದರೆಗಳು ಇದ್ದವು ಎಂದು ಹೇಳಿದ್ದೇನೆ ಎಂದರೆ ನಿಜ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಮತ್ತು ಎ ಎಲ್ ಸಿ ಯವರ ಮುಂದೆ ಹಾಜರು ಮಾಡಿಲ್ಲ. ಆದರೆ ಈ ಬಗ್ಗೆ ವಿವರಣೆ ನೀಡಿದ್ದೇವೆ. 2007 ರಿಂದ ಇಲ್ಲಿಯವರೆಗೂ ನಮ್ಮ ಕಂಪನಿ ಯಾವುದೇ ವರ್ಷದಲ್ಲಿ ನಷ್ಟದಲ್ಲಿ ನಡೆದಿಲ್ಲ ಸಾಕ್ಷಿಯು ಅದನ್ನು ಮ್ಯಾನೇಜ್ಮೆಂಟ್ ರವರು ಹೇಳಬೇಕು ಎಂದು ಹೇಳುತ್ತಾರೆ. ನಮ್ಮ ಕಂಪನಿಗೆ ಲಾಭ ಆಗಿದೆಯೇ, ನಷ್ಟ ಆಗಿದೆಯೇ ಎಂಬುದು ನಮ್ಮ ಹಂತಕ್ಕೆ ಬರುವುದಿಲ್ಲ ಅದನ್ನು ಮ್ಯಾನೇಜ್ಮೆಂಟ್ ಲೆವಲ್ಲಿನಲ್ಲಿ ನೋಡಬೇಕಾಗುತ್ತದೆ. ನಮ್ಮ ಕಂಪನಿಗೆ ಆರ್ಥಿಕ ಸಂಕಷ್ಟಗಳು ಇದ್ದವು ಎಂದು ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪಾರ್ಟಿಯವರ ಚಾರ್ಟರ್ಡ ಆಫ್ ಡಿಮ್ಯಾಂಡ್ಸಗೆ ವಿರುದ್ದವಾಗಿ ನಮ್ಮ ಕೌಂಟರ್ ಡಿಮ್ಯಾಂಡ್ಸನ್ನು ಕೇಳಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿಲ್ಲ. ಜುಲೈ-2019 ರಲ್ಲಿ ನಮ್ಮ ಕಂಪನಿಯು ಇಂಡಸ್ಟ್ರಿ ಸ್ಲೋ ಡೌನ್ ಕಂಡಿತ್ತು ನಮ್ಮ ಕಂಪನಿಯ ಮುಖ್ಯ ಕಛೇರಿಯಿಂದ ಈ ಬಗ್ಗೆ ಮಾಹಿತಿ ಬಂತು ಎಂದು ಹೇಳಿದ್ದೇನೆ ಎಂದರೆ ನಿಜ. ಆ ಸಂಬಂಧ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ನಮ್ಮ ಕಂಪನಿಯ ಆರ್ಥಿಕ ಸ್ಥಿತಿಯನ್ನು ಸರಿದೂಗಿಸುವ ಉದ್ದೇಶದಿಂದ ಎಕ್ಸ್ಯೂಟೀವ್ರ ಸಂಬಳದಲ್ಲಿ ಶೇಕಡ 30 ರಷ್ಟನ್ನು ಏಪ್ರಿಲ್-2020 ರಿಂದ ಸೆಪ್ಟಂಬರ್-2020 ರವರೆಗೆ ಕಡಿತಗೊಳಿಸಬೇಕೆಂದು ನಿರ್ಧರಿಸಲಾಯಿತು ಎಂಬ ಬಗ್ಗೆ ದಾಖಲೆಯನ್ನು ಹಾಜರು ಮಾಡಿಲ್ಲ. ಅದೇರೀತಿಯಲ್ಲಿ ಲಾಕ್ ಡೌನ್ ಅವಧಿಯ ನಂತರ ಡೊಮೆಸ್ಟಿಕ್ ಮತ್ತು ಓವರ್ ಸೀಸ್ ಮಾರ್ಕೆಟ್ಟಿನಲ್ಲಿ ವ್ಯವಹಾರವು ಶೇಕಡ 65 ರಷ್ಟು ಕಡಿಮೆ ಆಯಿತು ಎಂಬ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಅದೇರೀತಿಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ 10, 11 ಮತ್ತು 12 ನೇ ಪ್ಯಾರಾಗಳಲ್ಲಿ ಹೇಳಿರುವ ಅಂಶಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ನಾವು 1 ನೇ ಪಾರ್ಟಿಯವರ ಚಾರ್ಟರ್ ಆಫ್ ಡಿಮ್ಯಾಂಡ್ಸ್ ಬಗ್ಗೆ ಯಾವತ್ತೂ ಕೂಡ ಚರ್ಚೆ ಮಾಡಲು ತಯಾರಿರಲಿಲ್ಲ ಎಂದರೆ ಸರಿಯಲ್ಲ. ನಾವು ಕೌಂಟರ್ ಡಿಮ್ಯಾಂಡ್ಸಳ ಬಗ್ಗೆ ಮಾತ್ರ ಚರ್ಚೆ ಮಾಡುತ್ತಿದ್ದೆವು ಚಾರ್ಟರ್ ಆಫ್ ಡಿಮ್ಯಾಂಡ್ಸ ಬಗ್ಗೆ ಚರ್ಚೆ ಮಾಡಿಲ್ಲ ಎಂದರೆ ಸರಿಯಲ್ಲ. ಎ ಎಲ್ ಸಿ ರವರ ಮುಂದೆ ನಡೆದ ಕನ್ಸಿಲೇಶನ್ ಸಮಯದಲ್ಲಿ ನಮ್ಮ ಕೌಂಟರ್ ಡಿಮ್ಯಾಂಡ್ಗಳಲ್ಲಿ 10 ಡಿಮ್ಯಾಂಡ್ಗಳನ್ನು 1 ನೇ ಪಾರ್ಟಿಯವರು ಒಪ್ಪಿಕೊಂಡರು ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ನಮ್ಮ ಮ್ಯಾನೇಜ್ಮೆಂಟ್ ರವರ ಅಡಮೆಂಟ್ ವರ್ತನೆಯಿಂದ ಕನ್ಸಿಲಿಯೇಶನ್ ಫೇಲಾಯಿತು ಎಂದರೆ ಸರಿಯಲ್ಲ. ನಮ್ಮ ಮ್ಯಾನೇಜ್ಮೆಂಟ್ ರವರು 1 ನೇ ಪಾರ್ಟಿಯವರ ಚಾರ್ಟರ್ ಆಫ್ ಡಿಮ್ಯಾಂಡ್ಸ ಬಗ್ಗೆ ಚರ್ಚೆ ಮಾಡಲು

Ref.No.54/2020

MW-1,

ಸಿದ್ದರಿರಲಿಲ್ಲ ಎಂದರೆ ಸರಿಯಲ್ಲ. 2021 ರಲ್ಲಿ ನಮ್ಮ ಕಂಪನಿಯಿಂದ ಎಲ್ಲರಿಗೂ ಇಂಕ್ರಿಮೆಂಟ್ ಸಿಕ್ಕಿದೆ. ಯೂನಿಯನ್ ಮೆಂಬರ್ಸಿಗೆ 2021 ರಿಂದ ಇಲ್ಲಿಯವರೆಗೂ 2 ಪಿ ಯಲ್ಲಿ ಸೆಟ್ಲಮೆಂಟ್ ಮಾಡಿದ್ದೇವೆ. 2021 ರಲ್ಲಿ ಚಾರ್ಟರ್ ಆಫ್ ಡಿಮ್ಯಾಂಡ್ಸನ್ನು ವಿತ್ ಡ್ರಾ ಮಾಡಿದಲ್ಲಿ ಒಂದು ಇಂಕ್ರಿಮೆಂಟ್ ಕೊಡುವುದಾಗಿ ಭರವಸೆ ನೀಡಿದ್ದರಿಂದ ಅದನ್ನು ವಿತ್ ಡ್ರಾ ಮಾಡಿದ್ದಾರೆ ಎಂದರೆ ಸಾಕ್ಷಿ ನಾವು ಒತ್ತಾಯ ಮಾಡಿರಲಿಲ್ಲ ಅವರಾಗೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. 2018-19 ರ ಚಾರ್ಟರ್ ಆಫ್ ಡಿಮ್ಯಾಂಡ್ಸ ಮಾನ್ಯ ಮಾಡದೇ ಇರಲು ನಾವು ಹೇಳಿರುವ ಕಾರಣಗಳು ಕೋವಿಡ್ ನಂತರದ ಕಾರಣಗಳು ಎಂದರೆ ಸರಿಯಲ್ಲ. 2018-19 ರಲ್ಲಿ ಪ್ರೈಸ್ ಇಂಡೆಕ್ಸ ಜಾಸ್ತಿ ಆಯಿತು ಎಂಬ ಬಗ್ಗೆ ಪೂರಕ ದಾಖಲೆಗಳನ್ನು ಕೊಟ್ಟಿಲ್ಲ. ಎಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕಷ್ಟು ಬಾರಿ ಕಾರ್ಮಿಕ ಸಂಘದವರು ಈ ವಿಚಾರದಲ್ಲಿ ನಮಗೆ ಮನವರಿಕೆ ಮಾಡಿಕೊಟ್ಟರೂ ಕೂಡ ನಾವು ಅವರ ಬೇಡಿಕೆಗಳನ್ನು ಈಡೇರಿಸಲಿಲ್ಲ ಎಂದರೆ ಸರಿಯಲ್ಲ. 1 ನೇ ಪಾರ್ಟಿಯವರಿಗೆ ಸಂಬಳ ಕಡಿಮೆ ಇದ್ದ ಕಾರಣ ಅವತ್ತಿನ ಕಾಲಕ್ಕೆ ಅವರು ಕೇಳಿರುವ ಬೇಡಿಕೆಗಳು ಸರಿಯಾಗಿವೆ ಎಂದರೆ ಸರಿಯಲ್ಲ. ಅವರು ಕೇವಲ ಪತ್ರವನ್ನು ಮಾತ್ರ ಕೊಟ್ಟಿದ್ದರು ಪೂರಕವಾದ ದಾಖಲೆಗಳನ್ನು ಕೊಟ್ಟಿರಲಿಲ್ಲ. ನಾವು ಪರ್ಫಾರ್ಮೆನ್ಸ ಆಧಾರದಲ್ಲಿ ಸಂಬಳವನ್ನು ಕೊಡುತ್ತೇವೆ ಅವರು ಕಾರ್ಮಿಕ ಸಂಘದ ಸದಸ್ಯರು ಅಲ್ಲ ಎಂಬ ಬೇಧ ಬಾವ ಮಾಡುವುದಿಲ್ಲ. ಚಾರ್ಟರ್ ಆಫ್ ಡಿಮ್ಯಾಂಡ್-2 ಕೊಟ್ಟಾಗ ಅದರಲ್ಲಿ ಪರ್ಫಾರ್ಮೆನ್ಸ ಆಧಾರದಲ್ಲಿ ಆರ್ಥಿಕ ಸೌಲಭ್ಯ ನೀಡುವಂತೆ ಅವರೇ ಕೇಳಿಕೊಂಡಿದ್ದರು. ಆಪರೇಟರ್ ಗಳಿಗೆ ನಮ್ಮ ಕಂಪನಿಯಲ್ಲಿ ಎಷ್ಟು ಸಂಬಳ ಕೊಡುತ್ತಾರೆ ಮತ್ತು ಬೇರೆ ಕಂಪನಿಯುಲ್ಲಿ ಎಷ್ಟು ಸಂಬಳ ಕೊಡುತ್ತಾರೆ ಎಂದು ನಾವು ತಿಳಿದುಕೊಂಡಿಲ್ಲ ಅದನ್ನು 1 ನೇ ಪಾರ್ಟಿಯವರೇ ತಿಳಿದುಕೊಳ್ಳಬೇಕು. 1 ನೇ ಪಾರ್ಟಿಯವರು ಕೇಳಿರುವ ಬೇಡಿಕೆಗಳು ವೈಜ್ಞಾನಿಕವಾಗಿ ಮತ್ತು ವಸ್ತುನಿಷ್ಟವಾಗಿದ್ದವು ಎಂದರೆ ಸಾಕ್ಷಿ ಪೂರಕ ದಾಖಲೆಗಳನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ ಬೇಡಿಕೆಗಳು ಪ್ರೈಸ್ ಇಂಡೆಕ್ಸಿಗೆ ಅನುಗುಣವಾಗಿತ್ತು ಎಂದರೆ ದಾಖಲೆಗಳನ್ನು ಕೊಟ್ಟಿಲ್ಲ. ಚಾರ್ಟರ್ ಆಫ್ ಡಿಮ್ಯಾಂಡ್ ಚರ್ಚೆ ನಡೆಯುತ್ತಿದ್ದಾಗಲೇ ಒಟ್ಟು 10 ಜನ ಆಪರೇಟರುಗಳನ್ನು ಕಂಪನಿಯವರು ವಜಾ ಮಾಡಿದ್ದಾರೆ ಎಂದರೆ ಸಾಕ್ಷಿಯು ಮುಷ್ಕರ ಮಾಡಿದ್ದಕ್ಕೆ ವಜಾ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ಎನ್ಕ್ವೈರಿ ಮಾಡಿ ಸಾಭೀತಾಗಿದ್ದರಿಂದ ವಜಾ ಮಾಡಿದ್ದಾರೆ. ಈ ಸಂಬಂಧ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದೆ. 1 ನೇ ಪಾರ್ಟಿಯವರು ಕೇಳಿರುವ ಬೇಡಿಕೆಗಳನ್ನು ಪೂರೈಸಲು ನಾವು ಬದ್ದರಾಗಿದ್ದೇವೆ ಎಂದರೆ ಸರಿಯಲ್ಲ.

Ref.No.54/2020

MW-1,

ಮರು ವಿಚಾರಣೆಃ  ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.